# 'ಪ್ಯಾರಿಸ್' ಪ್ರೀತಿಯಲ್ಲಿ ಮಿಂದ ಧನ್ಯಾ

ತಿರುಗಾಟದ ಪ್ರೀತಿ ಬೆಳೆಸಿಕೊಂಡಿರುವ ನಟಿ ಧನ್ಯಾ ರಾಮ್‌ಕುಮಾರ್ ಈಚೆಗೆ 'ಸಿಟಿ ಆಫ್ ಲವ್' ಎಂದೇ ಕರೆಸಿಕೊಂಡಿರುವ ಪ್ಯಾರಿಸ್‌ಗೆ ಭೇಟಿ ನೀಡಿ ಬಂದಿದ್ದಾರೆ. ತಣ್ಣಗೆ ಕೊರೆಯುವ ಆ ನಗರ ಸೌಂದರ್ಯದ ಬೆಚ್ಚನೆಯ ಅನುಭವದಲ್ಲಿ ಮಿಂದಿದ್ದಾರೆ.

ಈ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಫೋಟೊಗಳನ್ನು ಹಂಚಿಕೊಂಡಿದ್ದಾರೆ ಧನ್ಯಾ.

'ನನ್ನ ಪ್ಯಾರಿಸ್ ಪಯಣದ ಕನಸು ಈಚೆಗೆ ನೆರವೇರಿತು. ಯೂರೋಪ್‌ನ ಹಲವು ಕಡೆ ಭೇಟಿ ನೀಡಿದ್ದೆ. ಪ್ಯಾರಿಸ್‌ಗೆ ಹೋಗಲು ಮಾತ್ರ ಆಗಿರಲಿಲ್ಲ. ಪ್ಯಾರಿಸ್‌ನಲ್ಲಿ ಏನೋ ಒಂದು ಜಾದೂ ಇದೆ ಎಂದು ಅಲ್ಲಿಗೆ ಹೋದವರಿಗೆಲ್ಲಾ ಅನ್ನಿಸದೇ ಇರದು. ಪ್ಯಾರಿಸ್ ನಗರ ತುಂಬಾ ಶೀತಲವಾಗಿತ್ತು. ಆದರೆ ಈ ನಗರದ ಸುಂದರ ಅನುಭವಗಳು ನನ್ನನ್ನು ಬೆಚ್ಚಗೆ ಇರಿಸಿದ್ದವು' ಎಂದು ತಮ್ಮ ಅನುಭವಗಳನ್ನು ಹಂಚಿಕೊಂಡಿದ್ದಾರೆ.

'ಪ್ಯಾರಿಸ್‌ಗೆ ಹೋಗುವ ಮುನ್ನ ಅಲ್ಲಿನ ಹಲವು ಸ್ಥಳಗಳಿಗೆ ಭೇಟಿ ಕೊಡಬೇಕು. ಜೊತೆಗೆ ಪ್ಯಾರಿಸ್ ಜನರ ಜೀವನವನ್ನು ಒಂದಷ್ಟು ಕಾಲ ನಾವೂ ಅನುಭವಿಸಬೇಕು ಎಂದುಕೊಂಡಿದ್ದೆವು. ಐದು ದಿನಗಳ ಈ ಪ್ರವಾಸದಲ್ಲಿ ಸಾಕಷ್ಟು ಸ್ಥಳಗಳನ್ನು ನೋಡಿದೆವು. ಐಫೆಲ್ ಟವರ್ ರಾತ್ರಿ ಹೊತ್ತು ಎಷ್ಟು ಮೋಹಕವಾಗಿ ಕಾಣುತ್ತದೆ ಎಂಬುದನ್ನು ಒಪ್ಪಲೇಬೇಕಲ್ಲವೇ' ಎಂದಿದ್ದಾರೆ.

ಕಫೆ ಹಾಪಿಂಗ್ ಜೊತೆಗೆ ನೈಟ್ ಲೈಫ್ ಚಿತ್ರಣವನ್ನೂ ವರ್ಣಿಸಿದ್ದಾರೆ ಧನ್ಯಾ. ಆರ್ಕ್ ಡಿ ಟ್ರಿಯಾಂಫ್, ಮಾಂಟ್‌ಮಾರ್ಟ್‌ಕ್ಕೆ ಭೇಟಿ ನೀಡಿದ್ದಾರೆ. 'ಪ್ಯಾರಿಸ್, ಒಂದೇ ಪ್ರವಾಸದಲ್ಲಿ ನೋಡಿಬಿಡುವ ಊರಲ್ಲ. ಇಲ್ಲಿಗೆ ಮತ್ತೆ ಮತ್ತೆ ಬರುತ್ತಲೇ ಇರಬೇಕು ಎನಿಸುವಂಥ ದೇಶ' ಎಂದು ಹೊಗಳಿದ್ದಾರೆ.





# ಮತ್ತೆ 'ಇನ್‌ಸ್ಪೆಕ್ಟರ್ ವಿಕ್ರಂ' ಗೆಟಪ್‌ನಲ್ಲಿ ಶಿವಣ್ಣ

ಸೆಂಚುರಿ ಸ್ಟಾರ್ ಶಿವರಾಜ್‌ಕುಮಾರ್ 'ಇನ್‌ಸ್ಪೆಕ್ಟರ್ ವಿಕ್ರಂ' ಗೆಟಪ್‌ನಲ್ಲಿ ಮತ್ತೊಮ್ಮೆ ತೆರೆ ಮೇಲೆ ಬರುವ ಸಿದ್ಧತೆ ನಡೆಸಿದ್ದಾರೆ. 34 ವರ್ಷಗಳ ನಂತರ ಮತ್ತೆ ಇನ್‌ಸ್ಪೆಕ್ಟರ್ ಆಗಿ ಪ್ರೇಕ್ಷಕರನ್ನು ರಂಜಿಸಲು ರೆಡಿಯಾಗುತ್ತಿದ್ದಾರೆ.

ಶಿವರಾಜ್‌ಕುಮಾರ್ ಸೋದರ ಸಂಬಂಧಿ ಲಕ್ಕಿ ಗೋಪಾಲ್ ನಿರ್ದೇಶನದ ಈ ಚಿತ್ರ ಶೀಘ್ರದಲ್ಲೇ ಸೆಟ್ಟೇರಲಿದೆ.

1989ರಲ್ಲಿ ತೆರೆಕಂಡಿದ್ದ 'ಇನ್‌ಸ್ಪೆಕ್ಟರ್ ವಿಕ್ರಂ' ಸಿನಿಮಾದಲ್ಲಿ ಶಿವರಾಜ್‌ಕುಮಾರ್ ಜಾಲಿ ಜಾಲಿಯಾದ ಇನ್‌ಸ್ಪೆಕ್ಟರ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದರು. ಆ ಸಿನಿಮಾ ಶಿವರಾಜ್‌ಕುಮಾರ್ ಅವರ ಸಿನಿಪಯಣದಲ್ಲಿ ವಿಶೇಷ ಪ್ರಯತ್ನವಾಗಿತ್ತು. ದಿನೇಶ್ ಬಾಬು ನಿರ್ದೇಶಿಸಿದ್ದ ಸಿನಿಮಾ ದೊಡ್ಡ ಹಿಟ್ ಕೂಡ ಆಗಿತ್ತು. ಇದೀಗ 34 ವರ್ಷದ ಅನುಭವವನ್ನು ಪಡೆದುಕೊಂಡು ಆ ಇನ್‌ಸ್ಪೆಕ್ಟರ್ ಮತ್ತೊಮ್ಮೆ ಕಾಣಿಸಿಕೊಳ್ಳುತ್ತಿದ್ದಾರೆ. ಈ ಹೊಸ ಸಿನಿಮಾಗೆ 'ಐವಿ ರಿಟರ್ನ್ಸ್' (ಇನ್‌ಸ್ಪೆಕ್ಟರ್ ವಿಕ್ರಂ ರಿಟರ್ನ್ಸ್) ಎಂದು ಹೆಸರಿಡಲಾಗಿದೆ.

''ಶಿವರಾಜ್‌ಕುಮಾರ್ ಅವರು ಈ ಪಾತ್ರವನ್ನು ಇನ್ನಷ್ಟು ಫನ್ ಹಾಗೂ ಪ್ಲೇಫುಲ್ ಆಗಿ ನಿಭಾಯಿಸುತ್ತಾರೆ. ತಾಂತ್ರಿಕವಾಗಿ ಗಟ್ಟಿಯಾಗಿರುವ ಸಿನಿಮಾ ಹೆಣೆಯುತ್ತಿದ್ದೇವೆ. 'ಕಾಟೇರ' ಸಿನಿಮಾಗೆ ಡೈಲಾಗ್ ಬರೆದಿರುವ ಮಾಸ್ತಿ ಅವರು ಶಿವರಾಜ್‌ಕುಮಾರ್ ಅವರಿಗೆ ಡೈಲಾಗ್ ಬರೆಯುತ್ತಿದ್ದಾರೆ. ಈ ಡೈಲಾಗ್‌ಗಳನ್ನು ಅವರ ಮುಂದೆ ಹೇಳಿದಾಗ, ಅದನ್ನು ಎಂಜಾಯ್ ಮಾಡಿದರು. ಗಂಭೀರವಾದ ಪೊಲೀಸ್ ಕಥೆಯನ್ನು ಹಾಸ್ಯದ ಧಾಟಿಯಲ್ಲಿ ಹೇಳಲು ಹೊರಟಿದ್ದೇವೆ'' ಎಂದು ಲಕ್ಕಿ ಗೋಪಾಲ್ ವಿವರಿಸಿದ್ದಾರೆ. ಲಕ್ಕಿ ಗೋಪಾಲ್‌ಗೆ ಇದು ಮೊದಲ ಸಿನಿಮಾ.

ಚಿತ್ರದ ಪ್ರಿಪ್ರೊಡಕ್ಷನ್ ಕೆಲಸ ಮುಗಿದಿದ್ದು, ಶೀಘ್ರದಲ್ಲೇ 'ಇನ್‌ಸ್ಪೆಕ್ಟರ್ ವಿಕ್ರಂ ರಿಟರ್ನ್ಸ್' ಸಿನಿಮಾದ ಚಿತ್ರೀಕರಣ ಆರಂಭವಾಗಲಿದೆ. ಇತ್ತೀಚೆಗಷ್ಟೇ 'ಕವಲುದಾರಿ', 'ಸಪ್ತ ಸಾಗರದಾಚೆ ಎಲ್ಲೋ' ಖ್ಯಾತಿಯ ಹೇಮಂತ್ ರಾವ್ ನಿರ್ದೇಶನದ ಹೊಸ ಸಿನಿಮಾಗೆ ಹಸಿರು ನಿಶಾನೆ ನೀಡಿದ್ದ ಹ್ಯಾಟ್ರಿಕ್ ಹೀರೊ, ಇದೀಗ 'ಇನ್‌ಸ್ಪೆಕ್ಟರ್ ವಿಕ್ರಂ' ಆಗಿ ಮತ್ತೊಮ್ಮೆ ತೆರೆ ಮೇಲೆ ಬರಲು ಮುಂದಾಗಿದ್ದಾರೆ.